
ಕಡೆಗಣ್ಣಿನಿಂದ ಸಮುದಾಯ ನೋಡುತ್ತಿರುವಾಗಲೂ ಇವರಿಗೆ ತಮ್ಮ ಕಲೆ ಮತ್ತು ದೈವದ ಬಗೆಗಿನ ನಂಬಿಕೆ ನಾಶವಾಗದೇ ಇರುವುದು. ಬದುಕಿನ ಕೊನೆಯೇ ಇಲ್ಲದ ತಾಪತ್ರಯಗಳಲ್ಲೂ ಇವರನ್ನು ಕಾಪಾಡುವುದು ಈ ನಂಬಿಕೆಯೇ. ಬದುಕು ಕೊಡುವ ಸಣ್ಣಸಣ್ಣ ಸುಖಗಳನ್ನೇ ಅವುಚಿಕೊಂಡು ಇವರು ನಡೆಸುವ ಬದುಕು ಒಂದು ಸಾಂಸ್ಕೃತಿಕ ವಿನ್ಯಾಸವನ್ನೇ ಕಟ್ಟುತ್ತಾ ಹೋಗುತ್ತದೆ. ಕ್ಲೀಷೆಯಾದರೂ ಹೇಳಬೇಕು, ಇದೇ ನಿಜವಾದ ಕಲಾಸೇವೆ. ಕಲೆ ಕೊಡುವ ಆತ್ಮತೃಪ್ತಿಯನ್ನು ನಂಬಿಯೇ ಇವರು ತಮ್ಮ ಬದುಕಿನ ಚಕ್ಕಡಿಯನ್ನು ಹೊಡೆಯುತ್ತಲೇ ಇದ್ದಾರೆ.

ಈ ಪತ್ಯದಲ್ಲಿ ಒಟ್ಟು 8 ಮಂದಿ ಕಲಾವಿದರ ಬದುಕಿನ ಕಥನಗಳಿವೆ. ಎಲ್ಲರ ಬದುಕಿನ ತಳಹದಿಯೂ ಅದೇ ಬಡತನ, ಕೊನೆಯಿಲ್ಲದ ಕಷ್ಟಪರಂಪರೆಗಳು. ಕೆಲವರು ಮಾತ್ರ ನೆಮ್ಮದಿಯ ಬದುಕಿನ ಸೌಕರ್ಯವನ್ನು ಆಮೇಲಾಮೇಲೆ ಪಡೆದು ಕೊಳ್ಳುತ್ತಾರೆ. ಆದರೆ, ಕಲಾವಿದರಾಗಿ ಸ್ಥಾಪಿತರಾಗುವ ತನಕವೂ ಅದೇ ಕಥೆ. ಹಾಡು ಪಾಡು ಎನ್ನುವ ಮಾತಿಗೆ ಇವರಂತಹ ಉದಾಹರಣೆ ಬೇರಿಲ್ಲವೇನೋ. ಕಲಾವಿದರಾಗುವ ಪ್ರಕ್ರಿಯೆಯ ಪಾಡುಗಳನ್ನೇ ಇಲ್ಲಿ ಇವರು ಹಾಡಿದ್ದಾರೆ. ಹಾಡಿದ್ದಾರೆ ಎನ್ನುವ ಮಾತನ್ನು ಉದ್ದೇಶಪೂರ್ವಕವಾಗಿಯೇ ಬಳಸುತ್ತಿದ್ದೇನೆ. ಬದುಕಿನ ಕಷ್ಟಗಳನ್ನು ಹೇಳಿಕೊಳ್ಳುತ್ತಿರುವಾಗಲೂ ಮಂಟೇಸ್ವಾಮಿಯ, ಮಾದೇಶ್ವರನ ಕಥನಗಳ ಭಾಗಗಳನ್ನೇ ತನ್ಮಯವಾಗಿ ಹಾಡಿಕೊಳ್ಳುವ ಹಾಗೆಯೇ ಇವರು ಹೇಳುತ್ತಾರೆ. ತಮ್ಮಂದಿರ ಮೋಸ, ಹಡೆದ ತಂದೆಯ ತಿರಸ್ಕಾರ, ಕ್ರೌರ್ಯ, ತುತ್ತು ಕೂಳಿಗೂ ಪಟ್ಟ ಬವಣೆ ಯಾವುದನ್ನು ಹೇಳುತ್ತಿರುವಾಗಲೂ ಎದುರಿಗಿರುವವರ ಅನುಕಂಪ ಗಿಟ್ಟಿಸಿಕೊಳ್ಳಬೇಕು ಎನ್ನುವ ನಿರೀಕ್ಷೆಯೇ ಇಲ್ಲದೆ 'ಇದು ಬಾಳು ನೋಡು' ಎನ್ನುವಂತೆ ಹೇಳುತ್ತಾರಲ್ಲ, ಅದು ನಿಜಕ್ಕೂ ಬಲು ಕಷ್ಟದ್ದು. ಅಪ್ಪಟ ಕಲಾವಿದರಿಗೆ ಮಾತ್ರ ತಮ್ಮ ಬದುಕನ್ನೂ ಕಲಾಪತ್ಯದಂತೆ ಪರಿಭಾವಿಸಿ ಹೇಳಲು




ನಾವು ಕೂಗುವಾ ಕೂಗು
(ಮಂಟೇಸ್ವಾಮಿ ಪರಂಪರೆಯ
ನೀಲಗಾರರ ಆತ್ಮಕಥನಗಳು)
ಸಂ: ಕೃಷ್ಣಮೂರ್ತಿ ಹನೂರು
ಪು: 544; ಬೆ: 978 ರೂ.
ಪ್ರ: ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ,
ಮಾನಸ ಗಂಗೋತ್ರಿ, ಮೈಸೂರು – 570006.

ಸಾಧ್ಯವಾಗುತ್ತದೆಯೇನೋ. ಸಿದ್ಧಲಿಂಗಯ್ಯನವರು ಅವರ ಆತ್ಮಕಥನದಲ್ಲಿ ಬಳಸಿಕೊಳ್ಳುವ ಲಘು ವಿನೋದದ ಶೈಲಿಯನ್ನೂ ಇಲ್ಲಿನ ಬಹುಪಾಲು ಕಥನಗಳು ಬಳಸಿಕೊಳ್ಳುತ್ತವೆ.

ಮೊದಲನೆಯ ನಿರೂಪಣೆ ಮಳವಳ್ಳಿ ಮಹದೇವ ಸ್ವಾಮಿಯವರದು. ಮುಡುಕುತೊರೆಯಿಂದ ಅಮೆರಿಕದ ತನಕದ ಇವರ ಕಲಾಪ್ರಯಾಣ ಯಾವ ಜನಪ್ರಿಯ ಸಿನಿಮಾಗೆ ಕಮ್ಮಿಯಿಲ್ಲದಷ್ಟು ನಾಟಕೀಯ